**ಸಾಕ್ಷಿದಾರರನ್ನು ಕರೆಯಿಸಲಾಯಿತು** **ಪ್ರಮಾಣ ವಚನ ಬೋಧಿಸಲಾಯಿತು**

ದಿನಾಂಕ: **27.10.2025**

ಮಧ್ಯಂತರ ಅರ್ಜಿ ಆದೇಶದ ಮೇಲೆ **ಪಾಟೀ ಸವಾಲು:-** ಶ್ರೀ ಕೆ.ಎನ್.ಎಸ್ ಪ್ರತಿವಾದಿಯ ಪರ ವಕೀಲರಿಂದ

ಐಟಂ ನಂ.1 ರ ಸ.ನಂ ನನಗೆ ಗೊತ್ತಿಲ್ಲ. ಅದರ ಪಹಣಿಯನ್ನು ನೋಡಿರುವುದಿಲ್ಲ. ಐಟಂ ನಂ.1 ರಲ್ಲಿ ಎಷ್ಟು ಗುಂಟೆ ಎಂದು ದಾವೆಯಲ್ಲಿ ಬರೆಸಿದ್ದೀರಾ ಎಂದರೆ ಸಾಕ್ಷಿಯು ಎಕರೆ ಗಟ್ಟಲೆ ಎಂದು ಬರೆಸಿದ್ದೇನೆ ಎಂದು ಹೇಳಿದರು. ನಾನು ಹಾಜರು ಮಾಡಿರುವ ನಿಪಿ-3 ರಲ್ಲಿ 9 ಗುಂಟೆ ಇದ್ದು ದಾವೆಯಲ್ಲಿ ಕೇವಲ 7 ಗುಂಟೆ ಎಂದು ಸೇರಿಸಿರುತ್ತೇನೆ ಎಂದರೆ ಗೊತ್ತಿಲ್ಲ.

ಐಟಂ ನಂ 12 ರ ನಿಪಿ-26 ರಲ್ಲಿ 18 ಗುಂಟೆ ಎಂದು ನಮೂದು ಆಗಿದ್ದು, ದಾವೆಯಲ್ಲಿ ಕೇವಲ 10 ಗುಂಟೆ ಎಂದು ತೋರಿಸಿರುತ್ತೇನೆ ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ಐಟಂ ನಂ 17 ರ ನಿಪಿ-31 ರಲ್ಲಿ 22.50 ಗುಂಟೆ ಎಂದು ನಮೂದು ಆಗಿದ್ದು, ದಾವೆಯಲ್ಲಿ ಕೇವಲ 20 ಗುಂಟೆ ಎಂದು ತೋರಿಸಿರುತ್ತೇನೆ ಎಂದರೆ ನನಗೆ ಗೊತ್ತಿಲ್ಲ. ಐಟಂ ನಂ 5 ರ ನಿಪಿ-23 ರಲ್ಲಿ 1 ಗುಂಟೆ ಎಂದು ನಮೂದು ಆಗಿದ್ದು, ದಾವೆಯಲ್ಲಿ ಕೇವಲ ½ ಗುಂಟೆ ಎಂದು ತೋರಿಸಿರುತ್ತೇನೆ ಎಂದರೆ ನನಗೆ ಗೊತ್ತಿಲ್ಲ.

ನಾವು ವಾಸ ಇರುವ ಮನೆ 1ನೇ ಪ್ರತಿವಾದಿಗೆ ಸೇರಿದ್ದು ಎಂದರೆ ಸರಿ. ಸದರಿ ಮನೆಯನ್ನು ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸಾಕ್ಷಿಯು ಅದನ್ನು ನನ್ನ ತಂದೆಯಿಂದ ನಾನು ಖರೀದಿ ಮಾಡಿದ್ದೇನೆ ಎಂದು ಹೇಳಿದರು. ಸದರಿ ಮನೆಯನ್ನು ಖರೀದಿ ಮಾಡಿ ಸುಮಾರು 20 ವರ್ಷಗಳು ಆಗಿರುತ್ತದೆ. ಸದರಿ ಮನೆಯ ವಿಸ್ತೀರ್ಣ ನನಗೆ ಗೊತ್ತಿಲ್ಲ. ಸದರಿ ಮನೆಯ ಖಾತಾ ನನ್ನ ಹೆಸರಿನಲ್ಲಿ ಇದೆ. ನನ್ನ ಕ್ರಯ ಪತ್ರಕ್ಕೆ ನನ್ನ ತಂಗಿ ಹಾಗೂ ಅವರ ಮಕ್ಕಳು ಸಹಿ ಮಾಡಿರುವುದಿಲ್ಲ. ಸದರಿ ಮನೆಯ ಕ್ರಯ ಪತ್ರ ನನ್ನ ಬಳಿ ಇದೆ ಅದನ್ನು ನ್ಯಾಯಾಲಯಕ್ಕೆ ಹಾಜರು ಮಾಡಿರುವ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ಮನೆ 1ನೇ ಪ್ರತಿವಾದಿಯ ಪಿತ್ರಾರ್ಜಿತ ಸ್ವತ್ತು ಎಂದರೆ ಸರಿ. ಸದರಿ ಮನೆಗೆ ಸಾವಿತ್ರಮ್ಮ ಮತ್ತು ಅವರ ಮಕ್ಕಳಾದ ಚಂದ್ರೇಗೌಡ , ಮಂಜೇಗೌಡ ರವರಿಗೂ ಸಹ ಹಿಸ್ಸೆ ಹಕ್ಕು ಇದೆ ಎಂದರೆ ಸಾಕ್ಷಿಯು ಹೌದು ಎಂದು ಹೇಳಿದರು.

ಐಟಂ ನಂ.7 ರಲ್ಲಿ ಸ.ನಂ 4/19 ರಲ್ಲಿ 5.50 ಗುಂಟೆ 1ನೇ ಪ್ರತಿವಾದಿಯ ಹೆಸರಿನಲ್ಲಿ ಇದ್ದು ಅದನ್ನು ದಾವೆಗೆ ಸೇರಿಸಿಲ್ಲ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ಹೇಳಿದರು. ಸ.ನಂ 87/3 ರಲ್ಲಿ 4 ಗುಂಟೆ ಇದ್ದು

ಅದನ್ನು ದಾವೆಗೆ ಸೇರಿಸಿಲ್ಲ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ಹೇಳಿದರು. ಸದರಿ ಎಲ್ಲಾ ಆಸ್ತಿಗಳನ್ನು ಸೇರಿಸಲು ನನಗೆ ತೊಂದರೆ ಇರುವುದಿಲ್ಲ.

ನಿಪಿ-21 ರಿಂದ 31 ಹಾಜರು ಮಾಡಿರುವ ಪಹಣಿಗಳು ಯಾವಗ ಏಕ ಪಹಣಿ ಆಗಿರುತ್ತದೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ಹೇಳಿದರು. ಈ ದಾವೆಯನ್ನು ಹಾಕಿದ ನಂತರ 2014-2015 ರಲ್ಲಿ ವೆಂಕಟೇಗೌಡ, ರಂಗೇಗೌಡ ರವರು ವಿಭಾಗ ಆಗಿದ್ದಾರೆ ಎಂದು ಪಹಣಿ ಬಂದಿದ್ದು, ಆ ರೀತಿ ಯಾವಾಗ ಪ್ರತ್ಯೇಕ ಪಹಣಿ ಆಗಿರುತ್ತದೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ಹೇಳಿ ಮುಂದುವರೆದು ಮೊದಲಿನಿಂದಲೂ ವೆಂಕಟೇಗೌಡರ ಹೆಸರಿನಲ್ಲಿ ಇತ್ತು ಎಂದು ನುಡಿಯುತ್ತಾರೆ. ಹಾಗಾದರೆ ವೆಂಕಟೇಗೌಡ, ರಂಗೇಗೌಡ, ರಂಗೇಗೌಡ, ರಂಗೇಗೌಡ ರವರು 2014-2015 ರಲ್ಲಿ ವಿಭಾಗ ಆಗಿದ್ದಾರೆ ಎಂದು ಹೇಳಿದ್ದು ಯಾವ ದಿನಾಂಕದಂದು ವಿಭಾಗ ಆಗಿರುತ್ತಾರೆ ಎಂದರೆ ಸಾಕ್ಷಿಯು ಸುಮಾರು 20 ವರ್ಷಗಳ ಹಿಂದೆ ವಿಭಾಗ ಆಗಿರುತ್ತಾರೆ ಎಂದು ಹೇಳಿದರು. ಇನ್ನು ಕೆಲವು ಪಹಣಿಗಳಲ್ಲಿ 2007-2008 ವಿಭಾಗ ಆಗಿದೆ ಎಂದು ನಮೂದು ಆಗಿದೆ ಎಂದರೆ ಸಾಕ್ಷಿಯು ಅದೆಲ್ಲಾ ಸುಳ್ಳು ಎಂದು ಹೇಳಿದರು.

ದಾವಾ ಹಾಕುವ ಕಾಲಕ್ಕೆ ನಿಪಿ-1 ರಿಂದ 20 ದಾಖಲಾತಿಗಳು ವೆಂಕಟೇಗೌಡ ಹಾಗೂ ರಂಗೇಗೌಡರ ಹೆಸರಿಗೆ ಜಂಟಿ ದಾಖಲಾತಿಗಳು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ಹೇಳಿದರು. ದಾವಾ ಹಾಕಿದ ನಂತರ 2025 ರಲ್ಲಿ ಪ್ರತ್ಯೇಕ ಪಹಣಿಗಳು ಆಗಿವೆ ಎಂದು ದಾಖಲಾತಿಗಳನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ದಾವಾ ಹಾಕಿದಾಗ ಜಂಟಿಯಾಗಿದ್ದ ಪಹಣಿಗಳು 2025 ರಲ್ಲಿ ಏಕಪಹಣಿಗಳು ಹೇಗೆ ಆಗಿರುತ್ತದೆ ಎಂಬ ಬಗ್ಗೆ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದೀರಾ ಎಂದರೆ ಸಾಕ್ಷಿಯು ಇಲ್ಲ ಎಂದು ಹೇಳಿದರು. ದಾವೆಯನ್ನು ಸಲ್ಲಿಸುವ ಕಾಲದಲ್ಲೂ ರಂಗೇಗೌಡ, ರಂಗೇಗೌಡ, ವೆಂಕಟೇಗೌಡ, ರಂಗೇಗೌಡರವರ ಜಂಟಿಯಾಗಿದ್ದು ಅವರನ್ನು ದಾವೆಯಲ್ಲಿ ಸೇರಿಸಿಲ್ಲ ಎಂದು ಲಿಖಿತ ತಕರಾರು ಸಲ್ಲಿಸಿದ ನಂತರ ನಿಪಿ-21 ರಿಂದ 31 ವರಿಗೂ ದಾಖಲಾತಿಗಳನ್ನು ಸೃಷ್ಟಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಏಕಪಹಣಿ ಆಗಲು ಯಾವುದೇ ದಾಖಲಾತಿಗಳು ಇಲ್ಲದಿದ್ದರು ದಾವೆಗೋಸ್ಕರ ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

ವೆಂಕಟೇಗೌಡರು ನನ್ನ ಭಾಗವನ್ನು ನಿರಕಾರಣೆ ಮಾಡಿದರು ಎಂದು ಹೇಳಿದ್ದು ಯಾವಾಗ ನಿರಕಾರಣೆ ಮಾಡಿರುತ್ತಾರೆ ಎಂದರೆ ಸಾಕ್ಷಿಯು 15 ವರ್ಷಗಳ ಹಿಂದೆ ನಿರಕಾರಣೆ ಮಾಡಿದರು ಎಂದು ಹೇಳಿದರು. 1985 ರಲ್ಲಿ ವೆಂಕಟೇಗೌಡರು ನನಗೆ ಭಾಗ ಕೊಡುವುದಿಲ್ಲ ಎಂದು ಹೇಳಿ ಪ್ರತಿವಾದಿಗಳಿಗ ನೊಂದಾಯಿತ ವಿಲ್ ನ್ನು ಮಾಡಿದ್ದರು ಎಂದರೆ ಸರಿಯಲ್ಲ. ಸದರಿ ವಿಚಾರವನ್ನು ವಾದ ಪತ್ರದಲ್ಲಿ ಒಪ್ಪಿ ಹಾಕಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.,

ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಚನ್ನರಾಯಪಟ್ಟಣ